ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಸಚಿವರು ಓದಿದ ಉತ್ತರವನ್ನೆ ಕಳುಹಿಸಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:- ಅವರಾಗೇ ಅವರು ನೆನಪಿಸಿಕೊಂಡು ಪ್ರಾಮಾಣಿಕತೆಯಿಂದ ಹೇಳಿದ್ದಾರೆ.

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಿನ್ನೆ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಜೊತೆಗೆ ಎಲ್ಲಾ ವಿವರವಾದ ಮಾಹಿತಿಯನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸಿದ್ದೇವೆ.

ವಿಷಯ:- ಮಾಜಿ ಸಚಿವರಾದ ಸಾಗರವಳ್ಳಿ ರೇವಣ್ಣನವರನ್ನು ಬಂಧಿಸಿರುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಇಲ್ಲೇ ಇದ್ದಾರೆ. ಮಾಜಿ ಮಂತ್ರಿಗಳು ಶ್ರೀಮಾನ್ ರೇವಣ್ಣ ಅವರನ್ನು ಬಂಧಿಸಿದ್ದಾರೆ. ಹೇಮಾವತಿ ನದಿ ನೀರನ್ನು ಗುಬ್ಬಿ ತಾಲ್ಲೂಕು ಹಾದಲಗೆರೆ ಕೆರೆಗೆ ಬಿಡಬೇಕು ಎಂದು ಹೇಳಿರುವುದರಿಂದ ಅವರನ್ನು ಬಂಧಿಸಿದ್ದಾರೆ. ಅವರು ಮಾಜಿ ಸಚಿವರು. 80 ವರ್ಷ ಅವರಿಗೆ ಆಗಿರಬಹುದು. ಸಾಗರವಳ್ಳಿ ರೇವಣ್ಣನವರು. ಅವರು ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನವರು. ಅವರು ಬಹಳ ಪ್ರಾಮಾಣಿಕವಾಗಿ ಆ ಊರಿನ ಹಾದಲಗೆರೆ ಕೆರೆಗೆ ನೀರು ಬಿಡಬೇಕು ಎಂದು ಹೇಳಿ ಒಂದಲ್ಲ, ಅನೇಕ ಬಾರಿ ಮುಖ್ಯ ಮಂತ್ರಿಗಳ ಮನೆ ಮುಂದೆ ಸತ್ಯಾಗ್ರಹ ಮಾಡಿದರು. ಮಂತ್ರಿಗಳ ಮುಂದೆ ಸತ್ಯಾಗ್ರಹ ಮಾಡಿದರು. ಅವರು ಒಂದೇ ಸಮನೆ ಈ ಇಳಿವಯಸ್ಸಿನಲ್ಲಿ ನಿರಂತರವಾದ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವರನ್ನು ಇವರ ಮೇಲೆ ಸತ್ಯಾಗ್ರಹ ಮಾಡಿದವರನ್ನು ಕರೆದುಕೊಂಡು ಹೋಗಿ ಸೆಂಟ್ರಲ್ ಜೈಲಿನಲ್ಲಿಟ್ಟಿದ್ದಾರೆ. 80 ವರ್ಷ ಅವರಿಗೆ ಆಗಿದೆ. ಅದರಲ್ಲೂ ಅವರು ಮಾಜಿ ಮಂತ್ರಿಗಳು. ಬಹಳ ಸೌಜನ್ಯ ಇರುವ ವ್ಯಕ್ತಿ. ಈ ಪರಿಸ್ಥಿತಿ ಇದೆ. ಮೊದಲಿನಿಂದಲೂ ಬಂದಂಥ ಎಲ್ಲಾ ಮಂತ್ರಿಗಳು ನಾವು ಪರಿಶೀಲನೆ ಮಾಡುತ್ತೇವೆ, ಆ ಕೆರೆಗೆ ನೀರನ್ನು ಕೊಡುತ್ತೇವೆ, ಭರವಸೆ ಕೊಟ್ಟು ಕೊಂಡು ಹೇಳಿಕೊಂಡು ಬಂದಿದ್ದಾರೆ. ಇದೆಲ್ಲವನ್ನೂ ಮಾಡದೇ ಅವರು ಸತ್ಯಾಗ್ರಹ ಮಾಡಿದವರನ್ನು ಜೈಲಿನಲ್ಲಿಟ್ಟಿದ್ದಾರೆ. ಮಾನ್ಯ ಸಂಸದೀಯ ಸಚಿವರು ಇದ್ದಾರೆ. ಅವರನ್ನು ಯಾವ ಕಾರಣದ ಮೇಲೆ ಜೈಲಿನಲ್ಲಿಟ್ಟಿದ್ದೀರಿ? ಏನು ಉದ್ದೇಶ? ಯಾವ ಕೇಸನ್ನು ಅವರ ಮೇಲೆ ಹಾಕಿದ್ದೀರಿ? ಏನು ಕಾರಣವೂ ಇಲ್ಲದೆ ವಿನಾಕಾರಣ ಸತ್ಯಾಗ್ರಹ ಮಾಡಿದಂಥವರನ್ನು ತಾವು ಜೈಲಿನಲ್ಲಿಟ್ಟಿರುವುದು ಸರಿಯಲ್ಲ. ಮಾನ್ಯ ಗೃಹಸಚಿವರು ಕೂಡ ಇಲ್ಲೇ ಇದ್ದಾರೆ. ಅವರು ಈ ಕಡೆ ಗಮನ ಕೊಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾನು ಗಂಭೀರವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಮಗೆ ಅರಿವು ಇದೆಯೋ ಇಲ್ಲವೋ ನನಗೆ ಅರ್ಥವಾಗಲಿಲ್ಲ. ನಾನು ಜಾಸ್ತಿ ಹೋಗುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಿಮ್ಮ ಹತ್ತಿರ ನಾನು ವಾದಕ್ಕೆ ಇಳಿಯುವುದು ಅಷ್ಟು ಸಮಂಜಸವಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅವರು ಜೈಲಿನಲ್ಲಿದ್ದಾರೆ. ಹಿಂದೆ ವೈ.ಕೆ.ರಾಮಯ್ಯನವರ ಪ್ರಶ್ನೇನೂ ಇದೇ ಬಂದಿತ್ತು. ಅವರನ್ನೂ ಜೈಲಿನಲ್ಲಿಟ್ಟಿದ್ದರು. ಆಮೇಲೆ ಕೊನೆಗೆ ಅವರನ್ನು ಬಿಡುಗಡೆ ಮಾಡಿತು. ಆದರೆ ಇವರನ್ನು ಜೈಲಿನಲ್ಲಿಡುವ ಕಾರಣವೇನು? ಯಾವ ಉದ್ದೇಶಕ್ಕೆ ಜೈಲಿನಲ್ಲಿಟ್ಟಿದ್ದೀರಿ? ಅವರಿಗೆ 80 ವರ್ಷ ವಯಸ್ಸಾಗಿದೆ. ಅವರನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿಡುವ ಪರಿಸ್ಥಿತಿ ಬೇಡ. ಮತ್ತು ಸರ್ಕಾರ ನಿರ್ಧಾರ ಮಾಡಿ ಹಾದಲಗೆರೆ ಕೆರೆಗೆ ನೀರು ಬಿಡುವುದು ಏನು ಸರ್ಕಾರದ ನಿರ್ಧಾರ ಇದೆ, ಆ ನಿರ್ಧಾರವನ್ನು ಚಾಚು ತಪ್ಪದೆ ತಾವು ಮಾಡಬೇಕು. ಜೈಲಿನಿಂದ ಅವರನ್ನು ಯಾವಾಗ ಬಿಡುಗಡೆ ಮಾಡುತ್ತೀರಿ,

ಅವರನ್ನು ಜೈಲಿನಲ್ಲಿಡುವುದಕ್ಕೆ ಕಾರಣವೇನು ಎಂದು ಮಾನ್ಯ ಗೃಹಸಚಿವರು ಹೇಳಬೇಕು ಎಂದು ತಮ್ಮ ಮೂಲಕ ಅವರನ್ನು ಕೇಳುತ್ತಿದ್ದೇನೆ ಸ್ವಾಮಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಗೃಹಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾಗಿರುವ ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕಂಥ ವಿಚಾರದಲ್ಲಿ ಮಾನ್ಯ ಸಾಗರವಳ್ಳಿ ರೇವಣ್ಣನವರು 83ರಿಂದ 84 ರವೆರೆಗೂ ನಮ್ಮ ಪಕ್ಷದಲ್ಲಿ ನಮ್ಮ ಸರ್ಕಾರದಲ್ಲಿ ಮಂತ್ರಿಗಳಾಗಿದ್ದವರು. ಮತ್ತು ಈಗಲೂ ಸಹಿತ ಅವರು ನಮ್ಮ ಪಕ್ಷದಲ್ಲೇ ಇದ್ದಾರೆ. 15 ದಿವಸದ ಹಿಂದೆ ಸುಮಾರು ದಿನಗಳಿಂದ ಅವರ ಊರಿಗೆ ಸಂಬಂಧಪಟ್ಟ ಗುಬ್ಬಿ ತಾಲ್ಲೂಕಿನ ಒಂದು ಹಳ್ಳಿಗೆ ಹೇಮಾವತಿ ನೀರನ್ನು ಬಿಡುಗಡೆ ಮಾಡಬೇಕೆಂದು ಹೇಳಿ ಅವರು ಒತ್ತಾಯ ಮಾಡಿ ಈ ವಿಚಾರದಲ್ಲಿ ಬಹಳ ನಿಖರವಾಗಿ ಅವರು ಸತ್ಯಾಗ್ರಹ ಮಾಡುತ್ತಿರುವಂಥದ್ದು ಸತ್ಯವಾದ ಸಂಗತಿ. ನನಗೆ ದಿನಾಂಕ ಮತ್ತು ಟೈಮ್ ಅಷ್ಟು ಖಚಿತವಾದ ಮಾಹಿತಿ ತಾವು ಆಕಸ್ಮಿಕವಾಗಿ ಪ್ರಶ್ನೆ ಕೇಳಿದ್ದರಿಂದ ನನ್ನ ಮುಂದೆ ಇಲ್ಲ. ಸುಮಾರು 10-15 ದಿವಸಗಳ ಹಿಂದೆ ಮುಖ್ಯಮಂತ್ರಿಗಳ ನಿವಾಸದ ಮುಂದೆ ಬಂದು ನಾನು ಸತ್ಯಾಗ್ರಹ ಮಾಡುತ್ತೇನೆ ಎಂದು ಹೇಳಿ ಅವರು ಆಗ್ರಹ ಮಾಡಿದರು. ಆ ದಿವಸ ನಮ್ಮ ನೀರಾವರಿ ರಾಜ್ಯಮಂತ್ರಿಗಳನ್ನು ನಾನೇ ಕಳುಹಿಸಿ ಅವರು ಸತ್ಯಾಗ್ರಹ ಮಾಡತಕ್ಕಂಥ ಅವಶ್ಯಕತೆ ಇಲ್ಲ. ನೀರು ಬಿಡುವ ವಿಚಾರದಲ್ಲಿ ನಾವು ಅದರ ಬಗ್ಗೆ ಪರಿಶೀಲನೆ ಮಾಡುವ ಹಂತದಲ್ಲಿದ್ದೇವೆ. ಕಾಲುವೆ ಕೆಳಗಡೆ ಕೆರೆ ಇರುವುದಾದಲ್ಲಿ ನೀರು ಬಿಡುವುದಕ್ಕೆ ಸಾಧ್ಯ ಇದೆ. ಅದರಿಂದಾಗಿ ವಿಚಾರ ಮಾಡೋಣ ತಾವು ಹೋಗಿ ಹೇಳಿ ಎಂದು ನಾನು ಗೌರವಾನ್ವಿತ ನೀರಾವರಿ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೆ. ಅದೇ ಪ್ರಕಾರವಾಗಿ ನಮ್ಮ ರಾಜ್ಯ ಸಚಿವರಾಗಿರುವ ನೀರಾವರಿ ಮಂತ್ರಿಗಳಾದ ಮಾನ್ಯ ಮುನಿಯಪ್ಪನವರು ರೇವಣ್ಣನವರನ್ನು ಮಾನ್ಯ ಮುಖ್ಯಮಂತ್ರಿಗಳ ಕಛೇರಿಯ ಮುಂದೆ ಭೇಟಿ ಮಾಡಿದ್ದರು. ಮತ್ತು ಅದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸಹಿತ ಎಲ್ಲೋ ಹೊರಗಡೆ ಹೋಗಿದ್ದವರು ಬಂದು ಅವರನ್ನು ಭೇಟಿ ಮಾಡಿ ಅವರಿಗೆ ಭರವಸೆಯನ್ನು ಕೊಟ್ಟಿದ್ದರು. ನಾವು ಸ್ಥಳಪರಿಶೀಲನೆಯನ್ನು ಮಾಡುತ್ತೇವೆ ಎಂದು. ಸ್ಥಳ ಪರಿಶೀಲನೆ ಮಾಡುವುದಕ್ಕೆ ನಾಲ್ಕು ದಿನಗಳ ಹಿಂದೆ ಒಂದು ದಿನಾಂಕವನ್ನು ನಿಗದಿ ಮಾಡಿದ್ದರು. ಅವತ್ತು ವಿಧಾನಸಭೆಯಲ್ಲಿ ಆದಂಥ ಕೆಲವು ಘಟನಾವಳಿಗಳಿಂದಾಗಿ ಮಾನ್ಯ ನೀರಾವರಿ ಸಚಿವರು ಆ ದಿವಸ ಅಲ್ಲಿಗೆ ಇನ್ಸ್‌ಪೆಕ್ಷನ್‌ಗೆ ಹೋಗಲಿಕ್ಕೆ, ವೀಕ್ಷಣೆ ಮಾಡಲಿಕ್ಕೆ ಆಗಲಿಲ್ಲ. ಆ ಸಂದರ್ಭದಲ್ಲಿ ಅವರು ಬರಲಿಕ್ಕೆ ಆಗುವುದಿಲ್ಲ ಎಂದು ಹೇಳಿ ನೀರಾವರಿ ಇಲಾಖೆಯ ಒಬ್ಬ ಇಂಜಿನಿಯರ್‌ರವರು ಅವರ ಮನೆಗೆ ಹೋದಂಥ ಸಂದರ್ಭದಲ್ಲಿ ಅವರನ್ನು ಸುಮಾರು ಏಳೆಂಟು ಗಂಟೆಗಳ ಕಾಲ ಅವರ ಮನೆಯಲ್ಲೇ ಒಳಗಡೆ ಇಟ್ಟಿದ್ದಾರೆ ಎಂದು ತಿಳಿದುಬಂತು. ಡಿವೈಎಸ್‌ಪಿ ಮಟ್ಟದ ಅಧಿಕಾರಿಗಳು ಹೋಗಿ ನೀರು ಬಿಡುವುದರ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ, ಅನಿವಾರ್ಯ ಕಾರಣಗಳಿಂದ ಮಂತ್ರಿಗಳು ಬರುವುದಕ್ಕಾಗಲಿಲ್ಲ, ಅವರು ಮತ್ತೊಂದು ದಿವಸ ಬರುತ್ತಾರೆ, ತಾವು ಇಂಜಿನಿಯರ್ ಅವರನ್ನು ಬಂಧನದಲ್ಲಿರಿಸಬೇಡಿ, ಎಂದು ಮನವಿ ಮಾಡಿ ಕೊಂಡರೂ ಅವರು ಕೇಳಲಿಲ್ಲವಾದ ಕಾರಣ, ಯಾವ ಇಂಜಿನಿಯರ್ ಅವರನ್ನು ರಾತ್ರಿ 11 ಗಂಟೆಯವರೆಗೆ ಗೃಹ ಬಂಧನದಲ್ಲಿರಿಸಿದ್ದರೋ, ಅವರನ್ನು ಬಿಡುಗಡೆ ಮಾಡಿಸಬೇಕೆಂದು, ರೇವಣ್ಣ ಅವರನ್ನು ಬಂಧಿಸಿದ್ದು ನಿಜ. ಅದಾದ ನಂತರ ಅವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಿದಾಗ, ಅವರು ನಾನು ಬೇಲ್ ಕೊಟ್ಟು ಹೋಗುವುದಕ್ಕೆ ತಯಾರಿಲ್ಲ. ಇಂಜಿನಿಯರ್ ಅವರನ್ನು ಬಂಧನದಲ್ಲಿರಿಸಿರುವುದಕ್ಕೆ ಇವರು

ಕಾರಣಕರ್ತರೆಂದು ನನ್ನ ಮೇಲೆ ಕಾನೂನುಬಾಹಿರವಾಗಿ ಮೊಕದ್ದಮೆ ಹೂಡಿರುವುದರಿಂದ ಬೇಕಾದರೆ ನಾನು ಜೈಲಿಗೆ ಹೋಗಲು ತಯಾರಿದ್ದೇನೆ. ಎಂಬ ಮಾತುಗಳನ್ನು ಹೇಳಿದ ನಂತರ ನ್ಯಾಯಾಧೀಶರ ಆದೇಶದಂತೆ ಅವರನ್ನು ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು. ಇದರ ಬಗ್ಗೆ ನಾವು ಮುಖ್ಯಮಂತ್ರಿಗಳ ಜೊತೆ ವಿಚಾರ ಮಾಡುತ್ತೇವೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ನೀರು ಬಿಡುವ ವಿಷಯದಲ್ಲಿ ತಾಂತ್ರಿಕವಾಗಿ ಸಾಧ್ಯತೆಯಿದ್ದರೆ ನೀರನ್ನು ಬಿಡುಗಡೆ ಮಾಡೋಣ. ಇದು ಒಂದು ಭಾಗವಾದರೆ, ಅವರಿಗೆ ವಯಸ್ಸು ಜಾಸ್ತಿಯಾಗಿದ್ದು, ಅವರ ಆರೋಗ್ಯದ ಬಗ್ಗೆ ಹಾಗೂ ಒದಗಿಸಿಕೊಡಬೇಕಾಗಿರುವ ಸೌಕರ್ಯಗಳ ಬಗ್ಗೆ ಸರ್ಕಾರ ಗಮನ ಹರಿಸಿದೆ. ನಾನು ಭರವಸೆ ಕೊಡುತ್ತೇನೆ. ಅವರನ್ನು ಬಿಡುಗಡೆಗೊಳಿಸಲು ತಕ್ಷಣ ಏನು ಕ್ರಮ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಈಗ ಸಾಕಷ್ಟು ಸಮಯವಾಗಿದೆ. ನಾಳೆ ದಿವಸ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಅವರ ಬಗ್ಗೆ ನಮಗೆಲ್ಲರಿಗೂ ಗೌರವವಿದೆ. He fought for a pulic cause ಸಾರ್ವಜನಿಕ ಹಿತಾಸಕ್ತಿಗೋಸ್ಕರ ಅವರು ಹೋರಾಟ ಮಾಡಿರುವಂತಹವರು, ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಈ ವಿಷಯವನ್ನು ಸರ್ಕಾರ ಪರಿಶೀಲಿಸುತ್ತದೆಂದು ವಿನಮ್ರತೆಯಿಂದ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಗೃಹ ಸಚಿವರು ತಮಗೆ ಬಂದಿರುವ ವರದಿಯನ್ನು ಹೇಳುತ್ತಿದ್ದಾರೆ. ನನಗನ್ನಿಸುತ್ತದೆ. ಅವರು ಇಂಜಿನಿಯರ್ ಅವರನ್ನು ಬಂಧಿಸಿಲ್ಲ. ಮಂತ್ರಿಗಳು ಬರುತ್ತಾರೆ, ತಾವು ಅಲ್ಲಿಯತನಕ ಕುಳಿತುಕೊಳ್ಳಿ ಎಂದು ಕುಳ್ಳಿರಿಸಿರಬಹುದು, ಅವರ ಮನೆಯಲ್ಲಿಯೇ ಊಟ, ತಿಂಡಿ ಎಲ್ಲವನ್ನೂ ಮಾಡಿಸಿದ್ದಾರೆ. ಮಂತ್ರಿಗಳು ಬರುತ್ತಾರೆಂದು ವಿಶೇಷವಾದ ಊಟದ ವ್ಯವಸ್ಥೆ ಮಾಡಿಸಿದ್ದರೂ ಅವರು ಬರಲಿಲ್ಲ. ಒಟ್ಟಿಗೆ ಊಟ ಮಾಡಿ ಕುಳಿತುಕೊಳ್ಳಿ, ಮಂತ್ರಿಗಳ ಆಗಮನ ನೋಡೋಣ, ರಸ್ತೆ ನೋಡೋಣ, ಪರಿಶೀಲನೆ ಮಾಡೋಣ ಎಂದು ಇರಿಸಿಕೊಂಡಿರಬಹುದು. ಅವರು ಸುಮಾರು 80 ವರ್ಷ ವಯಸ್ಸಿನ ವ್ಯಕ್ತಿಯಾಗಿದ್ದು, ಅವರ ಬಗ್ಗೆ ಒಳ್ಳೆಯ ಗೌರವವಿದ್ದರೂ ಅವರು ಒಬ್ಬ ಇಂಜಿನಿಯರ್ ಅವರನ್ನು ಬಂಧಿಸಿಟ್ಟುಕೊಳ್ಳುತ್ತಾರೆಂದು ಹೇಳುವ ಮಾತು ಇದೆಯಲ್ಲಾ, ಅದನ್ನು ಯಾರೂ ಕೂಡ ಒಪ್ಪತಕ್ಕದ್ದಲ್ಲ, ಇದು ಸತ್ಯ. ಆದುದರಿಂದ, ಅವರ ಮೇಲೆ ತಾವು ಏನು ಮೊಕದ್ದಮೆಗಳನ್ನು ಹೂಡಿದ್ದೀರಿ, ಅದನ್ನು ಕೂಡಲೇ ಹಿಂತೆಗೆದುಕೊಂಡು ನಾಳೆಯೇ ಅವರನ್ನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು. ಜೊತೆಗೆ ಆ ಕೆರೆಗೆ ನೀರನ್ನು ಬಿಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಮಗೆ ಏನು ವರದಿ ಬರುತ್ತದೊ ಅದರ ಆಧಾರದ ಮೇಲೆ ಸದನದಲ್ಲಿ ನಾವು ಮಾತನಾಡಬೇಕಾಗುತ್ತದೆ. ಗೃಹಮಂತ್ರಿಯಾಗಿ ನಾನು ಎಲ್ಲಾ ಕಡೆಗಳಿಗೂ ಖುದ್ದಾಗಿ ಹೋಗಿ ಪರಿಸ್ಥಿತಿ ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಮೊನ್ನೆ ದಿವಸ ನಾನು ಶಿವಮೊಗ್ಗ-ಚಿತ್ರದುರ್ಗದಿಂದ ಬರುತ್ತಿರುವಾಗ ಇದರ ಬಗ್ಗೆ ವಿಚಾರಿಸಬೇಕೆಂದು ತುಮಕೂರಿನ ಮೂಲಕವೇ ಬಂದೆ. ನಾನು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದ್ದು, ಅವರು ಆಗ ಸಂಬಂಧಿತವಾದ ಎಲ್ಲಾ ದಾಖಲೆಗಳನ್ನೂ ಸಹ ತೋರಿಸಿದ್ದಾರೆ. ಅದರ ಆಧಾರದ ಮೇಲೆಯೇ ನಾನು ಇಲ್ಲಿ ಮಾತನಾಡುತ್ತಿದ್ದೇನೆಯೇ ವಿನಃ ಅಸತ್ಯವನ್ನು ನುಡಿಯಲು ಸಾಧ್ಯವಿಲ್ಲ. ನಾನು ನಿಜ ಹೇಳುತ್ತೇನೆ. ನೀರು ಬಿಡುವುದರ ಬಗ್ಗೆ ತಾಂತ್ರಿಕವಾಗಿ

ಸಾಧ್ಯವಿದ್ದರೆ ಬಿಡೋಣ. ಮತ್ತು ಅವರ ಮೇಲೆ ಹೂಡಿರುವ ಮೊಕದ್ದಮೆಯನ್ನು ಹಿಂತೆಗೆದುಕೊಂಡು ಅವರನ್ನು ಬಿಡುಗಡೆ ಮಾಡುವುದರ ಬಗ್ಗೆಯೂ ಸಹ ತಕ್ಷಣ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೆ, ನಾನು ಅವರನ್ನು ಇತ್ತೀಚೆಗೆ ಕಂಡಿದ್ದೇನೆ, ಅವರಿಗೆ ಬಹಳಷ್ಟು ವಯಸ್ಸಾಗಿದೆ. ಅವರು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಹೋರಾಟ ಮಾಡುತ್ತಿದ್ದು, ಭಾವನಾತ್ಮಕವಾಗಿ ಆ ವಿಷಯದ ಮೇಲೆ ಹೋರಾಟ ನಡೆಸುವ ಸಲುವಾಗಿ ಅದನ್ನು ಪಟ್ಟಾಗಿ ಹಿಡಿದಿದ್ದಾರೆ. ಅವರು ಹೇಳಿದ್ದು ಇಷ್ಟು; ಮಾನ್ಯ ಭಾರಿ ನೀರಾವರಿ ರಾಜ್ಯ ಸಚಿವರು ಅಲ್ಲಿಗೆ ಬರುವುದಾಗಿ ತಾರೀಖು, ವೇಳೆಯನ್ನು ಕೊಟ್ಟು ಅವ್ರೊತ್ತು ಸಂಜೆಯವರೆವಿಗೂ ಕಾಯ್ದರೂ ಬರಲಿಲ್ಲ, ಅಲ್ಲದೆ, ಅಂದು ಬರುವುದಕ್ಕೆ ಆಗುವುದಿಲ್ಲವೆಂದು ಹೇಳಿ ಕಳುಹಿಸುವಷ್ಟೂ ಸೌಜನ್ಯವೂ ಸಹ ತೋರಲಿಲ್ಲ. ಅವರು ಈಗಲಾದರೂ ಇಂತಹ ದಿನಾಂಕದಂದು ಬರುತ್ತೇನೆಂದು ಹೇಳಿದರೆ ಮಾತ್ರ ನಾನು ಕೈಗೊಂಡಿರುವ ಸತ್ಯಾಗ್ರಹವನ್ನು ಬಿಟ್ಟು ವಾಪಸ್ಸು ಹೋಗಲು ತಯಾರಿದ್ದೇನೆ. ಎಂದು. ಆದರೆ, ಅವರು ಇಂಜಿನಿಯರ್ ಅವರನ್ನು ಬಂಧಿಸಿದರೆಂದು ಅವರು ಏನು ಕಟ್ಟುಕತೆ ಹೇಳಿದ್ದಾರೆ, ಅದೆಲ್ಲವೂ ಸುಳ್ಳು, ನಾನು ಕಾದಿದ್ದು ನಿಜ, ಸಚಿವರು ಅಂದು ಬಾರದಿದ್ದುದೂ ನಿಜ ಕೊನೆಗೆ ಅವರು ಬಾರದಿದ್ದುದಕ್ಕೆ ಸತ್ಯಾಗ್ರಹ ಮಾಡಿರುವುದಕ್ಕೆ ಈ ರೀತಿಯಾಗಿದೆ. ಎಂದು ಹೇಳಿದರು. ಅವರು ಹಿರಿಯರಾಗಿದ್ದು, ಹಿಂದೆ ಈ ಸದನದ ಸದಸ್ಯರಾಗಿದ್ದರಲ್ಲದೆ ಸಚಿವರೂ ಆಗಿದ್ದರು. ಅವರ ಬಗ್ಗೆ ಇಷ್ಟು ಅಲಕ್ಷ್ಯದಿಂದ ನಡೆದುಕೊಂಡಿದ್ದು ಸ್ವಲ್ಪ ತಪ್ಪೆಂದು ನನ್ನ ಭಾವನೆಯಾಗಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೆ, ಸಾಗರವಳ್ಳಿ ರೇವಣ್ಣನವರ ವಿಚಾರವಾಗಿ ಹೇಳುವುದಾದರೆ, ಸಾಗರವಳ್ಳಿ ನನ್ನ ಕ್ಷೇತ್ರದ ಪಕ್ಕದಲ್ಲಿ ಬರುತ್ತದೆ. ರೇವಣ್ಣನವರು ಬಹಳ ಹಿರಿಯರಾಗಿದ್ದಾರೆ. ಅವರು ಈಗಷ್ಟೇ ಅಲ್ಲ, ಹಿಂದೆ ನೀರಾವರಿ ಸಚಿವರುಗಳಾಗಿದ್ದಂಥ ಎಲ್ಲಾ ಸಚಿವರುಗಳ ಮನೆ ಮುಂದೆ ಅವರು ಪ್ರತಿಭಟನೆ ಮಾಡಿ, ಇದೇ ರೀತಿಯಾಗಿ ಬಂಧನಕ್ಕೊಳಗಾಗಿದ್ದರೂ ಸಾರ್ವಜನಿಕ ಹಿತಾಸಕ್ತಿಯ ವಿಚಾರಕ್ಕೆ ಸಂಬಂಧಿಸಿದಂತೆ ಬಹಳ ಹೋರಾಟ ಮಾಡುತ್ತಿರುವವರಾಗಿದ್ದಾರೆ. ನನಗೆ ತಿಳಿದಿರುವ ಮಟ್ಟಿಗೆ ಅವರು ಇಂಜಿನಿಯರ್ ಅವರನ್ನು ಬಂಧಿಸಿ ಮನೆಯೊಳಗೆ ಕೂಡಿ ಹಾಕಿರಲಿಲ್ಲ. ಅವರು ಇಂಜಿನಿಯರ್ ಅವರನ್ನು ಉದ್ದೇಶಿಸಿ, 'ಮಂತ್ರಿಗಳು ಬರುತ್ತಾರೆ, ನೀವೂ ಅಲ್ಲಿಯತನಕ ಕುಳಿತುಕೊಳ್ಳಿ' ಎಂದು ಹೇಳಿರುವ ವಿಚಾರ ನನಗೂ ಸಹ ಸ್ಪಷ್ಟವಾಗಿ ಅರ್ಥವಾಗಿರುವುದರಿಂದ ಅವರನ್ನು ಈಗ ಜೈಲಿನಿಂದ ಬಿಡುಗಡೆ ಮಾಡಿಸುವುದರ ಬಗ್ಗೆ ದಯಮಾಡಿ ಗೃಹ ಸಚಿವರು ಸದನದಲ್ಲಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಒಬ್ಬ ಗಿರಿಜನ ಮಹಿಳೆ ಪಂಚಾಯಿತಿ ಅಧ್ಯಕ್ಷೆಯಾಗಿ ಆಯ್ಕೆಯಾಗಿ ಒಂದು ತಿಂಗಳಾಗಿದ್ದರೂ, ಆ ಕುರಿತ ಪ್ರಕಟಣೆಯನ್ನು ಜಿಲ್ಲಾಧಿಕಾರಿಗಳು ಇದುವರೆವಿಗೂ ಮಾಡದೆ ಪೆಂಡಿಂಗ್ ಇಟ್ಟಿದ್ದಾರೆ. ಅದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದರೂ ಸದನದಲ್ಲಿ ಇನ್ನೂ ಪ್ರಸ್ತಾಪಕ್ಕೆ ಬರಲಿಲ್ಲ.

ಅಧ್ಯಕ್ಷರು:- ಪ್ರಕಟಣೆ ಹೊರಡಿಸೋಣ.

ಶ್ರೀ ವಾಟಾಳ್ ನಾಗರಾಜ್:- ಗೃಹ ಸಚಿವರಾದರೂ ಜೈಲಿಗೆ ಹೋಗಿ ಅಲ್ಲಿ ಬಂಧಿಸಿಟ್ಟಿರುವ

ಅವರ ಪರಿಸ್ಥಿತಿಯನ್ನು ವಿಚಾರ ಮಾಡಿ. ಏಕೆಂದರೆ, ಪರಿಸ್ಥಿತಿ ಆ ರೀತಿ ಇದೆ. ಸತ್ಯಕ್ಕೆ ದೂರವಾದ ಆರೋಪ ಹೊರಿಸಿ ಅವರನ್ನು ಜೈಲಿಗೆ ಹಾಕಿರತಕ್ಕಂಥಾದ್ದು ಸತ್ಯ. ನನಗೆ ಗೊತ್ತಿರುವಂತೆ, ಅವರ ಮನೆಯವರು, ಊರಿನವರು ಹಾಗೂ ಊರಿನ ಮುಖಂಡರುಗಳೆಲ್ಲರೂ ಬಂದು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರದಲ್ಲಿ ಸತ್ಯವಿಲ್ಲವೆಂದು ನಾನು ಹೇಳುತ್ತಿಲ್ಲ. ಅದರ ಬಗ್ಗೆ ನಾನು ಪ್ರಾಮಾಣಿಕವಾಗಿ ವಿಚಾರಿಸುತ್ತೇನೆ. ಇದನ್ನು ಅತ್ಯಂತ ವಿನಮ್ರತೆಯಿಂದ ತಲೆಬಾಗಿಸಿ ಸದನದ ಮುಂದೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಅವರು ನಿನ್ನೆ, ಮೊನ್ನೆಯಿಂದಲ್ಲ, ಸುಮಾರು ಏಳು ದಿವಸಗಳಿಂದ ಜೈಲಿನಲ್ಲಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಆ ಬಗ್ಗೆ ಎಫ್.ಐ.ಆರ್. ಇದ್ದು, ಚಾರ್ಜ್‌ಶೀಟ್ ಸಲ್ಲಿಸಿಲ್ಲ. ದಯವಿಟ್ಟು ಕೇಸನ್ನು ವಿಥ್‌ಡ್ರಾ ಮಾಡಿ. ಈ ಬಗ್ಗೆ ಹಿಂದೆ ಎಷ್ಟೋ ಸಾರಿ ಚಳುವಳಿ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಇಲ್ಲವೆಂದು ಹೇಳಿದೆನೆ? ಈಗ ಸಮಯ 6.30 ಆಗಿರುವುದರಿಂದ, ಈ ಕುರಿತು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ನಾಳೆ ಬೆಳಿಗ್ಗೆ ಸದನದಲ್ಲಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು:- ವೈ.ಕೆ.ರಾಮಯ್ಯನವರ ಕೇಸಿನಲ್ಲಿ ಮಾಡಿದ ಹಾಗೆ ಮಾಡಿ.

ಶ್ರೀ ವಾಟಾಳ್ ನಾಗರಾಜ್:- ವೈ.ಕೆ.ರಾಮಯ್ಯ ಮತ್ತು ರೇವಣ್ಣನವರ ವಿಚಾರದಲ್ಲಿ. ತೀರ್ಮಾನ ತೆಗೆದುಕೊಳ್ಳಬೇಕಾದರೆ ಮುಖ್ಯಮಂತ್ರಿಗಳ ಮಾತನ್ನು ಕೇಳಬೇಕಾಗುತ್ತದೆ. ಅವರು ಹೇಳಿದ್ದು ನಿಜ, ಅದರಲ್ಲಿ ಅರ್ಥವಿದೆ. ಏಕೆಂದರೆ, ತಕ್ಷಣ ನೇರವಾಗಿ ತೆಗೆದುಕೊಂಡರೆ ಅದು ಅಪರಾಧವಾಗುತ್ತದೆಂದು.....

ಅಧ್ಯಕ್ಷರು:- ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 37 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 7ನೇ ಸೆಪ್ಟೆಂಬರ್ ಮಾಹೆ 1995ರ ಗುರುವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)